# ವಿಡಿಐಟಿ ಸಿಬ್ಬಂದಿಗೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗೆ ಸ್ಟಾಫ್ ಡೇ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸ್ಟಾಫ್ ಡೇ ಪ್ರಯುಕ್ತ ಸಿಬ್ಬಂದಿಗೆ ಕಲೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಥ್ರೋಬಾಲ್ , ಕ್ರಿಕೆಟ್, ಹಗ್ಗ ಜಗ್ಗುವುದು, ಸ್ಲೋ ಸೈಕ್ಲಿಂಗ್, ಚೆಸ್ , ಕೇರಂ, ಲಗೋರಿ, ರಿಲೇ ಮುಂತಾದ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕ್ರಿಕೆಟ್‌ನಲ್ಲಿ ಆಫೀಸ್ ಸಿಬ್ಬಂದಿ ತಂಡ ಪ್ರಥಮ, ಲಗೋರಿಯಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗ ಪ್ರಥಮ, ರಿಲೇ ಓಟದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗ ಪ್ರಥಮ, ಟೇಬಲ್ ಟೆನಿಸ್ ನಲ್ಲಿ ಡಾ. ಮಹೇಂದ್ರ ದೀಕ್ಷಿತ್ ಪ್ರಥಮ, ಥ್ರೋಬಾಲ್‌ನಲ್ಲಿ ಪ್ರೊ. ವಿಜೇತ್ ಸ್ವಾದಿ ಪ್ರಥಮ, ಸ್ಲೋ ಸೈಕ್ಲಿಂಗ್‌ನಲ್ಲಿ ಪ್ರೊ. ರಜತ್ ಆಚಾರ್ಯ ಪ್ರಥಮ, ಕೇರಂ ಸ್ಪರ್ಧೆಯಲ್ಲಿ ಪ್ರೊ. ರವೀಂದ್ರ ಪಾಟೀಲ್ ಮತ್ತು ತಾನಾಜಿ ವಿಜಯಶಾಲಿಯಾದರೆ, ಚೆಸ್‌ನಲ್ಲಿ ಪ್ರೊ. ಕಾರ್ತಿಕ್ ಕುಲಕರ್ಣಿ ಪ್ರಥಮ, ಹಗ್ಗ ಜಗ್ಗುವ ಸ್ಪರ್ಧೆಯಲ್ಲಿ ಮೆಕ್ಯಾನಿಕಲ್ ವಿಭಾಗವು ವಿಜಯಶಾಲಿಯಾಯಿತು.

ಸಿಬ್ಬಂದಿಗೋಸ್ಕರ ಭೋಜನೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಹಾವಿದ್ಯಾಲಯದ ವಿವಿಧ ವಿಭಾಗದ ಸಿಬ್ಬಂದಿ ಸೌದೆ ಒಲೆಯಲ್ಲಿ ವಿವಿಧ ಬಗೆಯ ಶಾಖಾಹಾರಿ ಅಡುಗೆ ತಯಾರಿಸಿ ಗಮನ ಸೆಳೆದರು. ಸಿಬ್ಬಂದಿ ಮತ್ತು ಅವರ ಪರಿವಾರದವರು ಹಾಡು, ನೃತ್ಯ ಪ್ರದರ್ಶಿಸಿ ಮನರಂಜಿಸಿದರು. ಕ್ರೀಡಾ ಸ್ಪರ್ಧೆಗಳಲ್ಲಿ ಕಂಪ್ಯೂಟರ್ ವಿಭಾಗ ಹೆಚ್ಚಿನ ಅಂಕ ಪಡೆಯಿತು. ತಾಂತ್ರಿಕ, ಸಂಶೋಧನೆ ಸೇರಿದಂತೆ ಎಲ್ಲ ಕ್ಷೇತ್ರದ ಉತ್ತಮ ಸಾಧನೆಗಾಗಿ ಮೆಕ್ಯಾನಿಕಲ್ ವಿಭಾಗಕ್ಕೆ ಪ್ರಶಸ್ತಿ ನೀಡಲಾಯಿತು. ಎಲ್ಲ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜಯಶಾಲಿಯಾದ ತಂಡಗಳಿಗೆ ಹಾಗೂ ಸಿಬ್ಬಂದಿಗೆ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಬಹುಮಾನ ನೀಡಿ ಪುರಸ್ಕರಿಸಿದರು. ಶೈಕ್ಷಣಿಕ ವಿಭಾಗದಲ್ಲಿ ಗಣನೀಯ ಸಾಧನೆಗೈದ ಸಿಬ್ಬಂದಿ ಮಕ್ಕಳಿಗೆ ಪ್ರಾಚಾರ್ಯರು ಸನ್ಮಾನಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್, ಕಂಪ್ಯೂಟರ್ ಸೈನ್ಸ್ ಎಐ ಆ್ಯಂಡ್ ಎಂಎಲ್ ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.



# ವಿಡಿಐಟಿ ಸಿಬ್ಬಂದಿಗಾಗಿ ಕ್ರೀಡಾ, ಸಾಂಸ್ಕೃತಿಕ ಕಾರ್ಯಕ್ರಮ




ಕೆಎಲ್ಎಸ್ ವಿಡಿಐಟಿಯಲ್ಲಿ ನಡೆದ ಸ್ಟಾಫ್ ಡೇ ಕಾರ್ಯಕ್ರಮದಲ್ಲಿ ಏರ್ಪಡಿಸಿದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು.

**ಹಳಿಯಾಳ:** ಇಲ್ಲಿನ ಕೆಎಲ್ಎಸ್ ವಿಡಿಐಟಿಯಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗೆ ಸ್ಟಾಫ್ ಡೇ ಕಾರ್ಯಕ್ರಮವನ್ನು ಫೆಬ್ರವರಿ 14ರಂದು ಆಯೋಜಿಸಲಾಗಿತ್ತು. ಸ್ಟಾಫ್ ಡೇ ಪ್ರಯುಕ್ತ ಫೆ.11ರಿಂದ 14ರವರೆಗೆ ಸಿಬ್ಬಂದಿಗೆ ಕಲೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಥ್ರೋಬಾಲ್ , ಕ್ರಿಕೆಟ್, ಹಗ್ಗ ಜಗ್ಗುವುದು, ಸ್ಲೋ ಸೈಕ್ಲಿಂಗ್, ಚೆಸ್ , ಕೇರಂ, ಲಗೋರಿ, ರಿಲೇ ಮುಂತಾದ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಕ್ರಿಕೆಟ್ ನಲ್ಲಿ ಆಫೀಸ್ ಸಿಬ್ಬಂದಿ ತಂಡ ಪ್ರಥಮ, ಲಗೋರಿಯಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗ ಪ್ರಥಮ, ರಿಲೇ ಓಟದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗ ಪ್ರಥಮ, ಟೇಬಲ್ ಟೆನಿಸ್ ನಲ್ಲಿ ಡಾ. ಮಹೇಂದ್ರ ದೀಕ್ಷಿತ್ ಪ್ರಥಮ, ಥ್ರೋಬಾಲ್ ನಲ್ಲಿ ಪ್ರೊ. ವಿಜೇತ್ ಸ್ವಾದಿ ಪ್ರಥಮ, ಸ್ಲೋ ಸೈಕ್ಲಿಂಗ್ ನಲ್ಲಿ ಪ್ರೊ. ರಜತ್ ಆಚಾರ್ಯ ಪ್ರಥಮ, ಕೇರಂ ಸ್ಪರ್ಧೆಯಲ್ಲಿ ಪ್ರೊ. ರವೀಂದ್ರ ಪಾಟೀಲ್ ಮತ್ತು ತಾನಾಜಿ ವಿಜಯಶಾಲಿಯಾದರೆ, ಚೆಸ್ ನಲ್ಲಿ ಪ್ರೊ. ಕಾರ್ತಿಕ್ ಕುಲಕರ್ಣಿ ಪ್ರಥಮ, ಹಗ್ಗ ಜಗ್ಗುವ ಸ್ಪರ್ಧೆಯಲ್ಲಿ ಮೆಕಾನಿಕಲ್ ವಿಭಾಗವು ವಿಜಯಶಾಲಿಯಾಯಿತು.

ಸಿಬ್ಬಂದಿಗೋಸ್ಕರ ಭೋಜನೋತ್ಸವ ಕಾರ್ಯ ಕ್ರಮವನ್ನು ಫೆಬ್ರುವರಿ 13ರಂದು ಆಯೋಜಿಸಲಾಗಿತ್ತು.

ಮಹಾವಿದ್ಯಾಲಯದ ವಿವಿಧ ವಿಭಾಗದ ಸಿಬ್ಬಂದಿ ಸೌದೆ ಒಲೆಯಲ್ಲಿ ಬಗೆ ಬಗೆಯ ಶಾಖಾಹಾರಿ ಅಡುಗೆ ತಯಾರಿಸಿ ಗಮನ ಸೆಳೆದರು. ಫೆ.14ರಂದು ಸಿಬ್ಬಂದಿ ಮತ್ತು ಅವರ ಪರಿವಾರದವರು ಹಾಡು, ನೃತ್ಯ ಪ್ರದರ್ಶಿಸಿ ಮನರಂಜಿಸಿದರು.

ಕ್ರೀಡಾ ಸ್ಪರ್ಧೆಗಳಲ್ಲಿ ಕಂಪ್ಯೂಟರ್ ವಿಭಾಗ ಹೆಚ್ಚಿನ ಅಂಕ ಪಡೆಯಿತು. ತಾಂತ್ರಿಕ, ಸಂಶೋಧನೆ ಸೇರಿದಂತೆ ಎಲ್ಲ ಕ್ಷೇತ್ರದ ಉತ್ತಮ ಸಾಧನೆಗಾಗಿ ಮೆಕಾನಿಕಲ್ ವಿಭಾಗಕ್ಕೆ ಪ್ರಶಸ್ತಿ ನೀಡಲಾಯಿತು. ಎಲ್ಲ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜಯಶಾಲಿಯಾದ ತಂಡಗಳಿಗೆ ಹಾಗೂ ಸಿಬ್ಬಂದಿಗೆ ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ಬಹುಮಾನ ನೀಡಿ ಪುರಸ್ಕರಿಸಿದರು.

ಶೈಕ್ಷಣಿಕ ವಿಭಾಗದಲ್ಲಿ ಗಣನೀಯ ಸಾಧನೆಗೈದ ಸಿಬ್ಬಂದಿ ಮಕ್ಕಳಿಗೆ ಇದೇ ಸಂದರ್ಭದಲ್ಲಿ ಪ್ರಾಚಾರ್ಯರು ಸನ್ಮಾನಿಸಿದರು.

ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್, ಕಂಪ್ಯೂಟರ್ ಸೈನ್ಸ್ ಎಐ ಆ್ಯಂಡ್ ಎಂಎಲ್ ಮುಖ್ಯಸ್ಥೆ ಡಾ. ಪೂರ್ಣಿಮ ರಾಯ್ಕರ್ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

# ವಿಡಿಐಟಿ ಸಿಬ್ಬಂದಿಗಾಗಿ ಕ್ರೀಡಾ ಸಾಂಸ್ಕೃತಿಕ ಕಾರ್ಯಕ್ರಮ ಯಶಸ್ವಿ

**»ಜನಮಾಧ್ಯಮ, ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸ್ಟಾಫ್ ಡೇ ಕಾರ್ಯಕ್ರಮವನ್ನು ಫೆಬ್ರುವರಿ 14ರಂದು ಆಯೋಜಿಸಲಾಗಿತ್ತು. ಸ್ಟಾಫ್ ಡೇ ಪ್ರಯುಕ್ತ ಫೆಬ್ರುವರಿ11 ರಿಂದ 14ರವರೆಗೆ ಸಿಬ್ಬಂದಿಗಳಿಗೆ ಕಲೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಥ್ರೋಬಾಲ್, ಕ್ರಿಕೆಟ್, ಹಗ್ಗ ಜಗ್ಗುವುದು, ಸ್ಲೋ ಸೈಕ್ಲಿಂಗ್, ಚೆಸ್, ಕೇರಂ, ಲಗೋರಿ, ರಿಲೇ ಮುಂತಾದ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕ್ರಿಕೆಟ್ ನಲ್ಲಿ ಆಫೀಸ್ ಸಿಬ್ಬಂದಿಗಳ ತಂಡ ಪ್ರಥಮ, ಲಗೋರಿಯಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗ ಪ್ರಥಮ, ರಿಲೇ ಓಟದಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗ ಪ್ರಥಮ, ಟೇಬಲ್ ಟೆನಿಸ್‌ನಲ್ಲಿ ಡಾ. ಮಹೇಂದ್ರ ದೀಕ್ಷಿತ್ ಪ್ರಥಮ, ಥ್ರೋಬಾಲ್‌ನಲ್ಲಿ ಪ್ರೊ. ವಿಜೇತ್ ಸ್ವಾದಿ ಪ್ರಥಮ, ಸ್ಲೋ ಸೈಕ್ಲಿಂಗ್‌ನಲ್ಲಿ ಪ್ರೊ. ರಜತ್ ಆಚಾರ್ಯ ಪ್ರಥಮ, ಕೇರಂ ಸ್ಪರ್ಧೆಯಲ್ಲಿ ಪ್ರೊ. ರವೀಂದ್ರ ಪಾಟೀಲ್ ಮತ್ತು ತಾನಾಜಿ ವಿಜಯಶಾಲಿಯಾದರೆ, ಚೆಸ್‌ನಲ್ಲಿ ಪ್ರೊ. ಕಾರ್ತಿಕ್ ಕುಲಕರ್ಣಿ ಪ್ರಥಮ, ಹಗ್ಗ ಜಗ್ಗುವ ಸ್ಪರ್ಧೆಯಲ್ಲಿ ಮೆಕ್ಯಾನಿಕಲ್ ವಿಭಾಗವು ವಿಜಯಶಾಲಿಯಾಯಿತು.



ಸಿಬ್ಬಂದಿಗಳಿಗೋಸ್ಕರ ಭೋಜನೋತ್ಸವ ಕಾರ್ಯಕ್ರಮವನ್ನು ಫೆಬ್ರುವರಿ 13ರಂದು ಆಯೋಜಿಸಲಾಗಿತ್ತು. ಮಹಾವಿದ್ಯಾಲಯದ ವಿವಿಧ ವಿಭಾಗದ ಸಿಬ್ಬಂದಿಗಳು ಸೌದೆ ಒಲೆಯಲ್ಲಿ ಬಗೆ ಬಗೆಯ ಶಾಖಾಹಾರಿ ಅಡುಗೆ ತಯಾರಿಸಿ ಗಮನ ಸೆಳೆದರು. ಫೆಬ್ರುವರಿ 14ರಂದು ಸಿಬ್ಬಂದಿಗಳು ಮತ್ತು ಅವರ ಪರಿವಾರದವರು ಹಾಡು, ನೃತ್ಯ ಪ್ರದರ್ಶಿಸಿ ಮನರಂಜಿಸಿದರು.

ಕ್ರೀಡಾ ಸ್ಪರ್ಧೆಗಳಲ್ಲಿ ಕಂಪ್ಯೂಟರ್ ವಿಭಾಗ ಹೆಚ್ಚಿನ ಅಂಕ ಪಡೆಯಿತು. ತಾಂತ್ರಿಕ, ಸಂಶೋಧನೆ ಸೇರಿದಂತೆ ಎಲ್ಲ ಕ್ಷೇತ್ರದ ಉತ್ತಮ ಸಾಧನೆಗಾಗಿ ಮೆಕ್ಯಾನಿಕಲ್ ವಿಭಾಗಕ್ಕೆ ಪ್ರಶಸ್ತಿ ನೀಡಲಾಯಿತು. ಎಲ್ಲ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜಯಶಾಲಿಯಾದ ತಂಡಗಳಿಗೆ ಹಾಗೂ ಸಿಬ್ಬಂದಿಗಳಿಗೆ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಬಹುಮಾನ ನೀಡಿ ಪುರಸ್ಕರಿಸಿದರು. ಶೈಕ್ಷಣಿಕ ವಿಭಾಗದಲ್ಲಿ ಗಣನೀಯ ಸಾಧನೆಗೈದ ಸಿಬ್ಬಂದಿಗಳ ಮಕ್ಕಳಿಗೆ ಇದೇ ಸಂದರ್ಭದಲ್ಲಿ ಪ್ರಾಚಾರ್ಯರು ಸನ್ಮಾನಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ ಶಂಕರ್, ಕಂಪ್ಯೂಟರ್ ಸೈನ್ಸ್ ಎಐ ಆ್ಯಂಡ್ ಎಂಎಲ್ ಮುಖ್ಯಸ್ಥೆ ಡಾ. ಪೂರ್ಣಿಮ ರಾಯ್ಕರ್ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

Main Edition
Feb 17, 2025 Page No. 2
Powered by: janamadhyama.news